ಕರ್ನಾಟಕ ವಿಧಾನಸಭೆ

ಹದಿನಾಲ್ಕನೇ ವಿಧಾನಸಭೆ
(ಎಂಟನೇ ಅಧಿವೇಶನ)

ಕಾರ್ಯಕಲಾಪಗಳ ಪಟ್ಟಿ

ಶುಕ್ರವಾರ, ದಿನಾಂಕ 03ನೇ ಜುಲೈ, 2015
(ಸಮಯ: ಬೆಳಗ್ಗೆ 10.00 ಗಂಟೆಗೆ)

-----

1. ವಿತ್ತೀಯ ಕಾರ್ಯಕಲಾಪಗಳು

ಅ) 2015-16ನೇ ಸಾಲಿನ ಈ ಕೆಳಕಂಡ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ, ಸರ್ಕಾರದ ಉತ್ತರ ಮತ್ತು ಮತಕ್ಕೆ ಹಾಕುವುದು;

ಬೇಡಿಕೆ ಸಂಖ್ಯೆ	**ಬೇಡಿಕೆಗಳ ಹೆಸರು**
07	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
01	ಕೃಷಿ ಮತ್ತು ತೋಟಗಾರಿಕೆ

ಆ) 2015-16ನೇ ಸಾಲಿನ ಈ ಕೆಳಕಂಡ ಅನುದಾನ ಬೇಡಿಕೆಯ ಮಂಡನೆ ಮತ್ತು ಚರ್ಚೆ;

ಬೇಡಿಕೆ ಸಂಖ್ಯೆ	**ಬೇಡಿಕೆಯ ಹೆಸರು**
09	ಸಹಕಾರ

2. ಶಾಸನ ರಚನೆ

ವಿಧೇಯಕವನ್ನು ಮಂಡಿಸುವುದು.

ಕರ್ನಾಟಕ ಲಘು ವಿವಾದ ನ್ಯಾಯಾಲಯಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2015
ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಪಶುಸಂಗೋಪನೆ ಮತ್ತು ಮುಜರಾಯಿ ಸಚಿವರು) ಅವರು;

ಅ) 2015ನೇ ಸಾಲಿನ ಕರ್ನಾಟಕ ಲಘು ವಿವಾದ ನ್ಯಾಯಾಲಯಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುವುದು;
ಆ) ಹಾಗೂ ವಿಧೇಯಕವನ್ನು ಮಂಡಿಸುವುದು.

3. ಪ್ರಶ್ನೋತ್ತರ

ಅ) ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು : ಐದನೇ ಪಟ್ಟಿ

ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು : ಐದನೇ ಪಟ್ಟಿ

ಪು.ತಿ.ನೋ.,.

4. ಗಮನ ಸೆಳೆಯುವ ಸೂಚನೆಗಳು

1. ಶ್ರೀ ಮನೋಹರ್ ಹೆಚ್. ತಹಶೀಲ್ದಾರ್ ಅವರು ಹಾನಗಲ್ ತಾಲ್ಲೂಕಿನ ಗ್ರಾಮೀಣ ಪ್ರದೇಶಗಳ ಹಾಳಾಗಿರುವ ರಸ್ತೆಗಳ ಸುಧಾರಣೆಗಾಗಿ ಅನುದಾನ ಬಿಡುಗಡೆ ಮಾಡಿ ಕಾಮಗಾರಿಗಳನ್ನು ಪ್ರಾರಂಭಿಸುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಗಮನ ಸೆಳೆಯುವುದು.

2. ಶ್ರೀ ಸಿ.ಟಿ.ರವಿ ಅವರು ಚಿಕ್ಕಮಗಳೂರು ತಾಲ್ಲೂಕಿಗೆ 2013-14ನೇ ಸಾಲಿನಲ್ಲಿ ಎಂಟು ಗ್ರಾಮೀಣ ಶುದ್ಧ ಕುಡಿಯುವ ನೀರಿನ ಘಟಕಗಳು ಮಂಜೂರಾಗಿದ್ದರೂ, ಕಾರ್ಯಾರಂಭ ಮಾಡದಿರುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಗಮನ ಸೆಳೆಯುವುದು.

3. ಶ್ರೀ ಕೆ.ಆರ್. ರಮೇಶ್‌ಕುಮಾರ್ ಅವರು ಸರ್ಕಾರದ ವಿವಿಧ ಇಲಾಖೆಗಳಿಂದ ಕೊರೆಯುತ್ತಿರುವ ಕೊಳವೆ ಬಾವಿಗಳಿಗೆ ಬೆಸ್ಕಾಂನವರು ವಿದ್ಯುತ್ ಸಂಪರ್ಕ ಕಲ್ಪಿಸಲು ನಿರಾಕರಿಸುತ್ತಿರುವ ಬಗ್ಗೆ ಮಾನ್ಯ ಇಂಧನ ಸಚಿವರ ಗಮನ ಸೆಳೆಯುವುದು.

4. ಶ್ರೀಮತಿ ಶಾರದಾ ಪೂರ್ಯ ನಾಯಕ ಅವರು ಶಿವಮೊಗ್ಗ ತಾಲ್ಲೂಕಿನ ಮಡಕಿಚೀಲೂರು ಗ್ರಾಮದ ಸರ್ವೆ ನಂ. 78 ಮತ್ತು 79ರಲ್ಲಿನ ಜಮೀನುಗಳಲ್ಲಿ ಸಾಗುವಳಿ ಮಾಡುತ್ತಿರುವ ಬಗರ್ ಹುಕುಂದಾರರಿಗೆ ಹಕ್ಕು ಪತ್ರಗಳನ್ನು ನೀಡುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುವುದು.

5. ಶ್ರೀ ಗುರು ಪಾಟೀಲ್ ಶಿರವಾಳ ಅವರು ಕೃಷ್ಣಾ ಜಲ ಭಾಗ್ಯ ನಿಗಮದ ನಾರಾಯಣಪುರ ಶಾಖೆಯ ಚಿತ್ತಾಪುರ-ಅಂಗಸುಗೂರಿನಿಂದ ಅಡವಿಬಾವಿಯವರಿಗೆ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಲ್ಲಿಸಲಾಗಿದ್ದ ತಾಂತ್ರಿಕ ಬಿಡ್‌ನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಅವರು ನಿಯಮಬಾಹಿರವಾಗಿ ತಿರಸ್ಕರಿಸಿರುವ ಬಗ್ಗೆ ಮಾನ್ಯ ಭಾರೀ ಮತ್ತು ಮಧ್ಯಮ ನೀರಾವರಿ ಸಚಿವರ ಗಮನ ಸೆಳೆಯುವುದು.

6. ಶ್ರೀ ಯು.ಬಿ. ಬಣಕಾರ ಅವರು ಹಾವೇರಿ ಜಿಲ್ಲೆ ಹಿರೇಕೆರೂರ ತಾಲ್ಲೂಕಿನ ಮೈದೂರ ಗ್ರಾಮದ ಕೃಷಿ ಜಮೀನುಗಳಲ್ಲಿ ಸಾಗುವಳಿ ಮಾಡುತ್ತಿರುವ ಜಮೀನು ಮಾಲೀಕರ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುವುದು.

7. ಶ್ರೀ ಜೆ.ಟಿ.ಪಾಟೀಲ್ ಅವರು ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ಬಾಗಲಕೋಟೆ ಜಿಲ್ಲೆಯಲ್ಲಿ ನೈಸರ್ಗಿಕವಾಗಿ ಪ್ರವಾಸೋದ್ಯಮ ಅಭಿವೃದ್ಧಿಪಡಿಸುವ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರ ಗಮನ ಸೆಳೆಯುವುದು.

8. ಶ್ರೀ ಮಾಲೀಕಯ್ಯ ವೆಂಕಯ್ಯ ಗುತ್ತೇದಾರ್ ಅವರು ಕಲಬುರ್ಗಿ ಜಿಲ್ಲೆ ಅಫಜಲಪುರ್ ಮತಕ್ಷೇತ್ರಕ್ಕೆ ಬಸವ, ಡಾ॥ಅಂಬೇಡ್ಕರ್ ಹಾಗೂ ವಾಜಪೇಯಿ ಯೋಜನೆಯಡಿಯಲ್ಲಿ ಮನೆಗಳು ಮಂಜೂರಾಗಿದ್ದರೂ, ನೋಡಲ್ ಅಧಿಕಾರಿಗಳ ಕೊರತೆಯಿಂದ ಹಣ ಬಿಡುಗಡೆ ವಿಳಂಬವಾಗಿರುವ ಬಗ್ಗೆ ಮಾನ್ಯ ವಸತಿ ಸಚಿವರ ಗಮನ ಸೆಳೆಯುವುದು.

.....3

9. ಶ್ರೀ ಎಂ.ಟಿ.ಕೃಷ್ಣಪ್ಪ ಅವರು ತುಮಕೂರು ಜಿಲ್ಲೆ ತುರುವೇಕೆರೆ ಪಟ್ಟಣದಲ್ಲಿ ವಾಣಿಜ್ಯ ಸಂಕೀರ್ಣವನ್ನು ನಿರ್ಮಾಣ ಮಾಡಲು 2006-07ರಲ್ಲಿ ಹಣ ಬಿಡುಗಡೆಯಾಗಿದ್ದರೂ, ಕಾಮಗಾರಿಯನ್ನು ಪೂರ್ಣಗೊಳಿಸದಿರುವ ಬಗ್ಗೆ ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರ ಗಮನ ಸೆಳೆಯುವುದು.

10. ಶ್ರೀ ಹೆಚ್.ಡಿ. ರೇವಣ್ಣ ಅವರು ಹಾಸನ ಜಿಲ್ಲೆಯ ಚನ್ನರಾಯಪಟ್ಟಣ, ಹಾಸನ ಹಾಗೂ ಹೊಳೆನರಸೀಪುರ ತಾಲ್ಲೂಕುಗಳ ಹಲವು ಸರ್ಕಾರಿ ಐ.ಟಿ.ಐ. ಕಾಲೇಜ್‌ಗಳಿಗೆ ಸ್ವಂತ ಕಟ್ಟಡಗಳಿಲ್ಲದೆ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವ ಬಗ್ಗೆ ಮಾನ್ಯ ಕಾರ್ಮಿಕ ರಾಜ್ಯ ಸಚಿವರ ಗಮನ ಸೆಳೆಯುವುದು.

11. ಶ್ರೀ ಪಿಳ್ಳಮುನಿಶಾಮಪ್ಪ ಅವರು ಬೆಂಗಳೂರು-ದೇವನಹಳ್ಳಿ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಟೋಲ್‌ನಲ್ಲಿ ಬಿ.ಎಂ.ಟಿ.ಸಿ ಬಸ್‌ಗಳಿಂದ ಹಾಗೂ ಸಾರ್ವಜನಿಕರಿಂದ ಹೆಚ್ಚಿನ ಶುಲ್ಕವನ್ನು ವಸೂಲಿ ಮಾಡುತ್ತಿರುವುದರಿಂದ ಉಂಟಾಗಿರುವ ತೊಂದರೆಯ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯುವುದು.

12. ಶ್ರೀ ವಿ.ಸುನೀಲಕುಮಾರ್ ಅವರು ಕಾರ್ಕಳ ತಾಲ್ಲೂಕಿನ ಹಲವು ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಆರ್.ಎಂ.ಎಸ್.ಎ. ಯೋಜನೆಯಡಿಯಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಅನುದಾನ ಮಂಜೂರಾಗಿದ್ದರೂ, ಕಾಮಗಾರಿ ಅಪೂರ್ಣವಾಗಿರುವ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನ ಸೆಳೆಯುವುದು.

13. ಶ್ರೀ ಸಂಜಯ ಬಿ. ಪಾಟೀಲ್ ಅವರು 1994-95ರಲ್ಲಿ ಪ್ರಾರಂಭವಾದ ಪದವಿಪೂರ್ವ ಕಾಲೇಜುಗಳನ್ನು ಇದುವರೆವಿಗೂ ಅನುದಾನಕ್ಕೆ ಒಳಪಡಿಸದಿರುವ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನ ಸೆಳೆಯುವುದು.

14. ಶ್ರೀಯುತರುಗಳಾದ ಹೆಚ್.ಎಸ್. ಪ್ರಕಾಶ್, ಹೆಚ್.ಕೆ.ಕುಮಾರಸ್ವಾಮಿ ಹಾಗೂ ಹೆಚ್.ಡಿ.ರೇವಣ್ಣ ಅವರುಗಳು ಹಾಸನ ಜಿಲ್ಲೆ ಹಾಸನ ತಾಲ್ಲೂಕು ಕಸಬಾ ಹೋಬಳಿ ಬೂವನಹಳ್ಳಿ ಗ್ರಾಮದಲ್ಲಿ ಕಾನೂನುಬಾಹಿರವಾಗಿ ಖಾಸಗಿಯವರ ಜಮೀನನ್ನು ಟೌನ್ ಪ್ಲಾನಿಂಗ್ ಅನುಮತಿ ಪಡೆಯದೆ ಬಡಾವಣೆ ನಿರ್ಮಿಸುತ್ತಿರುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುವುದು.

15. ಶ್ರೀ ಪಿ.ರಾಜೀವ್ ಅವರು ರಾಯಭಾಗ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿ ಇತ್ತೀಚಿನ ಮಳೆ ಮತ್ತು ಗಾಳಿಯಿಂದಾಗಿ ರೈತರು ಬೆಳೆದ ಬಾಳೆ ಬೆಳೆ ನಷ್ಟವಾಗಿದ್ದು, ಪರಿಹಾರ ನೀಡುವ ಬಗ್ಗೆ ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರ ಗಮನ ಸೆಳೆಯುವುದು.

16. ಶ್ರೀ ಬಿ.ವೈ. ರಾಘವೇಂದ್ರ ಅವರು ಗ್ರಾಮಾಂತರ ಖಾತೆ ಸರಳೀಕರಣಕ್ಕೆ ಯೋಜನೆ ರೂಪಿಸುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುವುದು.

17. ಶ್ರೀ ಎಂ.ಕೃಷ್ಣಾರೆಡ್ಡಿ ಅವರು ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲ್ಲೂಕಿನಾದ್ಯಂತ ಕುಡಿಯುವ ನೀರಿನ ತೊಂದರೆಯಿಂದ ಉಂಟಾಗಿರುವ ಪರಿಸ್ಥಿತಿಯ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಗಮನ ಸೆಳೆಯುವುದು.

ಪು.ತಿ.ನೋ.,.

18. ಡಾ॥ ಎ.ಬಿ. ಮಾಲಕರೆಡ್ಡಿ ಅವರು ಬೆಳಗಾವಿಯ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಖಾಯಂ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು/ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ಹೊಸ ಪಿಂಚಣಿ ಸೌಲಭ್ಯವನ್ನು ಅಳವಡಿಸದಿರುವ ಬಗ್ಗೆ ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರ ಗಮನ ಸೆಳೆಯುವುದು.

19. ಶ್ರೀಯುತರುಗಳಾದ ಸಿ.ಎನ್.ಬಾಲಕೃಷ್ಣ, ಕೆ.ಎಂ.ಶಿವಲಿಂಗೇಗೌಡ ಮತ್ತು ಹೆಚ್.ಡಿ.ರೇವಣ್ಣ ಅವರುಗಳು 2015-16ನೇ ಸಾಲಿನಲ್ಲಿ ಹೇಮಾವತಿ ಜಲಾಶಯ ಯೋಜನಾ ವಲಯ ಮುಖ್ಯ ಇಂಜಿನಿಯರ್ ಕಛೇರಿ ಗೊರೂರು ಇವರ ಲೆಕ್ಕ ಶೀರ್ಷಿಕೆಯಲ್ಲಿ ಬಿಡುಗಡೆಯಾಗಿರುವ ಅನುದಾನವನ್ನು ಹಂಚಿಕೆ ಮಾಡದಿರುವ ಬಗ್ಗೆ ಮಾನ್ಯ ಭಾರೀ ಮತ್ತು ಮಧ್ಯಮ ನೀರಾವರಿ ಸಚಿವರ ಗಮನ ಸೆಳೆಯುವುದು.

5. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

ಶ್ರೀಯುತರುಗಳಾದ ಹೆಚ್.ಕೆ.ಕುಮಾರಸ್ವಾಮಿ, ಬಿ.ಬಿ.ನಿಂಗಯ್ಯ, ಕೆ.ಜಿ.ಬೋಪಯ್ಯ, ವಿಶ್ವೇಶ್ವರ ಹೆಗಡೆ ಕಾಗೇರಿ, ಸಿ.ಟಿ.ರವಿ ಹಾಗೂ ಇತರರು ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ, ಹಾಸನ ಮತ್ತು ಕಾರವಾರ ಜಿಲ್ಲೆಗಳಲ್ಲಿ ಬಿದ್ದ ಭಾರೀ ಮಳೆ ಮತ್ತು ಬಿರುಗಾಳಿಯಿಂದಾಗಿ ಬೆಳೆ ನಾಶವಾಗಿ ರೈತರಿಗೆ ಉಂಟಾಗಿರುವ ನಷ್ಟಕ್ಕೆ ಪರಿಹಾರ ನೀಡಲು ವಿಶೇಷ ಪ್ಯಾಕೇಜ್ ಘೋಷಿಸುವಂತೆ ಪ್ರಸ್ತಾಪಿಸಿರುವ ಸೂಚನೆಯ ಬಗ್ಗೆ ಚರ್ಚೆ.

ಎಂ.ಗುರುರಾಜ
ಕಾರ್ಯದರ್ಶಿ

Raj Natyoudu

ವಿಧಾನಸಭೆಯ ಕಾರ್ಯಕಲಾಪಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿಯೂ ಸಹ ಪಡೆದುಕೊಳ್ಳಬಹುದು.
(http://kla.kar.nic.in/assembly/lob/lob.htm)

KARNATAKA LEGISLATIVE ASSEMBLY

FOURTEENTH ASSEMBLY

(Eighth Session)

LIST OF BUSINESS

Friday, the 3rd July, 2015

(Time: 10.00 a.m.)

-----

1 . FINANCIAL BUSINESS

a) Further Discussion and Reply by the Government on the following Demands for Grants for the Year 2015-16.

Demand No.	Name of the Demands
07	Rural Development and Panchayat Raj
01	Agriculture and Horticulture

b) Introduction, Discussion, on the following Demands for Grants for the Year 2015-16.

Demand No.	Name of the Demands
09	Co-operation

2. LEGISLATIVE BUSINESS

BILL FOR INTRODUCTION

The Karnataka Small Cause Courts And Certain Other Law (Amendment) Bill, 2015

Sri T.B.Jayachandra (Minister for Law, Parliamentary Affairs, Animal Husbandry and Muzarai) to move:-

a. that leave be granted to introduce The Karnataka Small Cause Courts And Certain Other Law (Amendment) Bill, 2015

b. also to introduce the Bill .

3. QUESTIONS

a)	**Questions for Oral Answers**	**:**	**Fifth List**
b)	**Questions for Written Answers**	**:**	**Fifth List**

P.T.O,.

4. CALLING ATTENTION NOTICES

1. Sri Manohar H. Tahashildar to call the attention of Hon'ble Minister for Rural Development and Panchayath Raj regarding to release the grant for the improvement of roads which are dilapidated in the rural parts of Hanagal taluk and commence the works thereof.
2. Sri C.T.Ravi to call the attention of Hon'ble Minister for Rural Development and Panchayath Raj regarding non functioning of 8 rural pure drinking water units so far eventhough they have been sanctioned to Chikkamagaluru taluk in 2013-14.
3. Sri K.R.Rameshkumar to call the attention of Hon'ble Minister for Energy regarding that the BESCOM is denying to provide electricity connection to the bore wells being drilled by the various departments of the Government.
4. Smt Sharada Poorya Naik to call the attention of Hon'ble Minister for Revenue regarding regularization of land and distribution of title deeds to the Bagar Hukum cultivators who are cultivating in the lands of survey No.78 and 79 of Madakichilaru village, Shivamoga taluk.
5. Sri Guru Patil Shiravala to call the attention of Hon'ble Minister for Major and Medium Irrigation regarding that the Assistant Executive Engineer has illegally rejected the technical bid which was submitted for the road development work from Chithapura-Lingasguru to Adavibhavi of Narayanapura branch canal of Krishna Bhagya Jala Nigama.
6. Sri U.B.Banakar to call the attention of Hon'ble Minister for Revenue regarding to set right the problems of land holders who are cultivating in agricultural land of Myduru village of Hirekeruru taluk, Haveri district.
7. Sri J.T.Patil to call the attention of Hon'ble Minister for Higher Education and Tourism regarding development of nature tourism from backwater of Almatti reservoir in Bagalakote district.

8. Sri Malikayya Venkaiah Guttedar to call the attention of Hon'ble Minister for Housing regarding delay in releasing of amount to the houses due to shortage of Nodle Officers eventhough the houses have been sanctioned under Basava, Dr:Ambedkar and Vajapayee housing schemes to Afzalpur constituency of Kalburgi district.
9. Sri M.T.Krishnappa to call the attention of Hon'ble Minister for Muncipal Administration, Local bodies, Public Enterprises and Minorities Welfare regarding non-completion of the construction work of commercial complex in Turuvekere town of Tumkuru district eventhough the amount has been released for the same during the year 2006-07.
10. Sri H.D.Revanna to call the attention of Hon'ble Minister of State for Labour regarding hardship caused to the students as many Government ITI colleges of Chanarayapattna, Hassana and Holenarasipura taluks of Hassana district are not having own building.
11. Sri Pilla Munishamappa to call the attention of Hon'ble Minister for Public Works regarding hardship caused to the public due to collection of exorbitant toll from the B.M.T.C. buses and the public in the toll plaza situated on Bengaluru-Devanahalli National Highway.
12. Sri V.Sunilkumar to call the attention of Hon'ble Minister of State for Primary and Secondary Education regarding non-completion of the construction work of school buildings eventhough the grant has been sanctioned to the said works under R.M.S.A scheme to many Government Primary and High Schools of Karkala taluk.
13. Sri Sanjay B. Patil to call the attention of Hon'ble Minister of state for Primary and Secondary Education regarding that the Pre-University colleges which were commenced in 1994-95 have not been subjected to the grant-in-aid so far.

14. Sriyuths H.S.Prakash, H.K.Kumarswamy and H.D.Revanna to call the attention of Hon'ble Minister for Revenue regarding the layouts being formed illegally on the private land in Buvanahalli village of Kasaba hobli, Hassan taluk, Hassan district without obtaining the approval of town planning for the same.
15. Sri P.Rajeev to call the attention of Hon'ble Minister for Agriculture Marketing and Horticulture regarding to provide compensation to the farmers who are suffered loss due to damage of Banana crop by the recent rain and wind in the villages coming under the limits of Raybag taluk.
16. Sri B.Y.Raghavendra to call the attention of Hon'ble Minister for Revenue regarding to evolve the scheme for simplification of Rural Katha.
17. Sri M.Krishnareddy to call the attention of Hon'ble Minister for Rural Development and Panchayath Raj regarding the situation arised due to due to drinking water problem across the Chinthamani taluk of Chikkabalapura district.
18. Dr: A.B. Maalakareddy to call the attention of Hon'ble Minister of State for Medical Education regarding non application of the facility of new pension scheme to the doctors/teaching and non teaching staff who are working against the permanent post in Belagavi Institute of Medical Science,
19. Sriyuths: C.N.Balakrishna, K.M.Shivalingegowda and H.D.Revanna to call the attention of Hon'ble Minister for Major and Medium Irrigation regarding non allotment of the grant released under the head of account of office of the Chief Engineer, Hemavathi reservoir project zone, Goruru for the year 2015-16.

P.T.O,.

5. DISCUSSION FOR SHORT DURATION UNDER RULE 69

Sriyuths: H.K.Kumaraswamy, B.B.Ningaiah, K.G.Boppaiah, Vishweshwara Hegade Kageri, C.T.Ravi and others to raise discussion on the notice regarding announcement of special package to give compensation for the loss caused to the farmers by damaging of crops due to heavy rain and storm wind in Kodagu, Chikkamagaluru, Shivamogga, Hassan and Karawar districts.

M.GURURAJA
Secretary

Raj Nadgouda

ವಿಧಾನಸಭೆಯ ಕಾರ್ಯಕಲಾಪಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿಯೂ ಸಹ ಪಡೆದುಕೊಳ್ಳಬಹುದು.
(http://kla.kar.nic.in/assembly/lob/lob.htm)